ಕರ್ನಾಟಕ ಸರ್ಕಾರದ ನಡವಳಿಗಳು
ಜಲ ಸಂಪನ್ಮೂಲ ಇಲಾಖೆ

ವಿಷಯ:- ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕವಿತಾಳ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಕೆರೆ ನಿರ್ಮಾಣಕ್ಕಾಗಿ ಕವಿತಾಳ ಸೀಮಾದ ಸರ್ವೆ ನಂ.515ರಲ್ಲಿರುವ ಭೂಮಿಯಲ್ಲಿ 9 ಎಕರೆ 25 ಗುಂಟೆ ಜಮೀನನ್ನು 30 ವರ್ಷಗಳ ಅವಧಿಗೆ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ ವಿಭಾಗ, ಮಾನ್ವಿ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ.

ಓದಲಾಗಿದೆ:- 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು. ಇವರ ಪತ್ರ ಸಂ:ಕನೀನಿನಿ/ಕೇಕ/ಸಿ.11/ಎಎಸ್‌ಟಿ/295/ಕನೀನಿ/ಭೂ.ಹ/2015-16/6495, ದಿ:04.03.2016.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು. ಇವರ ಪತ್ರ ಸಂ:ಕನೀನಿನಿ/ಸಿ.11/ ಎಎಸ್‌ಟಿ/589/2015-16/5101, ದಿನಾಂಕ:10.12.2018.

*********

ಪ್ರಸ್ತಾವನೆ:

ಮೇಲೆ ಓದಲಾದ ಪತ್ರ (1) ರಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು, ಇವರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕವಿತಾಳ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಕೆರೆ ನಿರ್ಮಾಣಕ್ಕಾಗಿ ಕವಿತಾಳ ಸೀಮಾದ ಸರ್ವೆ ನಂ-515 ರಲ್ಲಿನ ಒಟ್ಟು 27 ಎಕರೆ 15 ಗುಂಟೆ ಪೈಕಿ 9 ಎಕರೆ 25 ಗುಂಟೆ ಜಮೀನನ್ನು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ ವಿಭಾಗ, ಮಾನ್ವಿ ಇವರಿಗೆ 50 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒದಗಿಸುವಂತೆ ಪ್ರಸ್ತಾಪಿಸಿರುತ್ತಾರೆ.

ಮೇಲೆ ಓದಲಾದ ಪತ್ರ (2) ರಲ್ಲಿ, ಪ್ರಸ್ತಾವನೆಯನ್ನು 30 ವರ್ಷಗಳ ಅವಧಿಗೆ ಮಾರ್ಪಾಟ್ಟು ಮಾಡಿ ಲೋಕೋಪಯೋಗಿ ಇಲಾಖೆ, ಮಾನ್ವಿ ಇವರು ನಿಗಧಿಪಡಿಸಿರುವ ಲೀಜ್ ದರ ಪ್ರತಿ ವಾರ್ಷಿಕ ರೂ.24,984/- ರಂತೆ 30 ವರ್ಷಗಳ ಅವಧಿಗೆ ಒಟ್ಟು ರೂ.7,49,520/- ಗಳಂತೆ ಗುತ್ತಿಗೆ ದರವನ್ನು ನಿರ್ಧರಿಸಿ, ಕವಿತಾಳ ಸೀಮಾದ ಸರ್ವೆ ನಂ-515 ರಲ್ಲಿನ 9 ಎಕರೆ 25 ಗುಂಟೆ ಜಮೀನನ್ನು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ ವಿಭಾಗ, ಮಾನ್ವಿ ಇವರಿಗೆ ಒದಗಿಸಲು ವ್ಯವಸ್ಥಾಪಕ ನಿರ್ದೇಶಕರು,, ಕನೀನಿನಿ ರವರು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಜಸಂಇ 14 ಎಂಟಿಪಿ 2016,
ಬೆಂಗಳೂರು, ದಿನಾಂಕ:27.05.2019.

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕವಿತಾಳ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಕೆರೆ ನಿರ್ಮಾಣಕ್ಕಾಗಿ ಕವಿತಾಳ ಸೀಮಾದ ಸರ್ವೆ

ನಂ.515ರಲ್ಲಿರುವ ಭೂಮಿಯಲ್ಲಿ 9 ಎಕರೆ 25 ಗುಂಟೆ ಜಮೀನನ್ನು ಪ್ರತಿ ವಾರ್ಷಿಕ ರೂ.24.984/- ರಂತೆ 30 ವರ್ಷಗಳ ಅವಧಿಗೆ ಒಟ್ಟು ರೂ.7.49.520/-ರ ಮೊತ್ತಕ್ಕೆ ಗುತ್ತಿಗೆ ದರವನ್ನು ನಿಗಧಿಪಡಿಸಿ. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪ ವಿಭಾಗ. ಮಾನ್ವಿ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ: ಆರ್‌ಡಿ 24 ಎಲ್‌ಜಿಆರ್ 2016. ದಿ:23.09.2016. ಕಾನೂನು ಇಲಾಖೆಯ ಟಿಪ್ಪಣಿ ಸಂಖ್ಯೆ:LAW 60 OPN 2017, ದಿ:23.02.2018 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 335 ಆಕೋ-1/2018 ದಿ:12.06.2018 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಹರಿ.ಎಸ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1).
ಜಲ ಸಂಪನ್ಮೂಲ ಇಲಾಖೆ

ಇವರಿಗೆ :-

1. ಪ್ರಧಾನ ಮಹಾಲೇಖಾಪಾಲರು. (ಸಾಮಾನ್ಯ ಮತ್ತು ಸಾಮಾಜಿಕ ವಲಯ. ಲೆಕ್ಕಪರಿಶೋಧನೆ). ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398. ಬೆಂಗಳೂರು 01.
2. ಮಹಾಲೇಖಾಪಾಲರು. (ಲೆಕ್ಕಪತ್ರ 1 ಮತ್ತು 2)ಹೊಸ ಕಟ್ಟಡ. ಬೆಂಗಳೂರು 01.
3. ಪ್ರಧಾನ ಮಹಾಲೇಖಾಪಾಲರು. (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ)). ಕರ್ನಾಟಕ ಬೆಂಗಳೂರು 01.
4. ಮಾನ್ಯ ಜಲ ಸಂಪಂನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನ ಸೌಧ. ಬೆಂಗಳೂರು 01
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿಗಳು (ಸಚಿವ ಸಂಪುಟ) ಪ್ರಕರಣ ಸಂ:ಸಿ: 214/2019 ದಿ:09.05.2019.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದಶಿಗಳು. ಕಂದಾಯ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದಶಿಗಳು. ಕಾನೂನು ಇಲಾಖೆ.
8. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು.
9. ಮುಖ್ಯ ಇಂಜಿನಿಯರ್. ನೀರಾವರಿ ಕೇಂದ್ರ ವಲಯ. ಮುನಿರಾಬಾದ್.
10. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು. ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ) ವಿಧಾನ ಸೌಧ ಬೆಂಗಳೂರು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.